ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಆಯುಕ್ತರು/ಜಿಆರ್/3159/2019-20

ಆಯುಕ್ತರ ಕಛೇರಿ
ಎಸ್.ಆರ್.ಬೌಕ, ಬೆಂಗಳೂರು-02
ದಿನಾಂಕ: 25-09-2019

ಸುತ್ತೋಲೆ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಸ್.ಸಿ.ಎಸ್.ಪಿ. ಮತ್ತು ಟಿಎಸ್.ಪಿ ಕಾಯ್ದೆಯಂತೆ "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ರೂ.573.58 ಕೋಟಿಗಳ ಮೊತ್ತದ ಕ್ರಿಯಾಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ನಅಇ 648 ಎಂಎನ್‌ವೈ 2018, ದಿನಾಂಕ:31-05-2019
2. ಸರ್ಕಾರದ ಪತ್ರ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ:05-08-2019
3. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018,ದಿನಾಂಕ:20-09-2019
4. ಪೂಜ್ಯ ಮಹಾಪೌರರ ಟಿಪ್ಪಣಿ ಸಂಖ್ಯೆ: ಎಂ.ಪಿ.ಎಸ್/ಜಿಆರ್/1045/2019-20, ದಿನಾಂಕ: 24-09-2019

****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಸ್.ಸಿ.ಎಸ್.ಪಿ. ಮತ್ತು ಟಿಎಸ್.ಪಿ ಕಾಯ್ದೆಯಂತೆ "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ರೂ.573.58 ಕೋಟಿಗಳ ಮೊತ್ತದ ಕ್ರಿಯಾಯೋಜನೆಯನ್ನು ಅನುಮೋದಿಸಿ ಉಲ್ಲೇಖ (1)ರ ಆದೇಶದನ್ವಯ ಸರ್ಕಾರದ ಆದೇಶ ಹೊರಡಿಸಲಾಗಿರುತ್ತದೆ. ಅನುಮೋದಿತ ಕ್ರಿಯಾಯೋಜನೆಯ ಪೈಕಿ ಈಗಾಗಲೇ ಕಾಮಗಾರಿಗಳಿಗೆ ಜಾಬ್ ಸಂಖ್ಯೆಯನ್ನು ನೀಡಿ ಕಾಮಗಾರಿಗಳು ಅನುಷ್ಠಾನ ಹಂತದಲ್ಲಿದ್ದ ಸಂದರ್ಭದಲ್ಲಿ, ಸರ್ಕಾರದ ಪತ್ರ ಸಂಖ್ಯೆ: ನಅಇ 375 ಎಂಎನ್‌ವೈ 2018 ಬೆಂಗಳೂರು, ದಿನಾಂಕ: 05-08-2019 ರಲ್ಲಿ "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ" ಅಡಿಯಲ್ಲಿ ಅನುಮೋದನೆಯಾಗಿರುವ ಕ್ರಿಯಾಯೋಜನೆಯ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡುವುದಾಗಲೀ ಅಥವಾ ಟೆಂಡರ್ ಕರೆಯುವುದನ್ನು ತಕ್ಷಣದಿಂದ ಸ್ಥಗಿತಗೊಳಿಸಲು ಸೂಚಿಸಿದ್ದ ಮೇರೆಗೆ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ ಯೋಜನೆಯ ಅನುಮೋದಿತ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸುವುದನ್ನು ಸ್ಥಗಿತಗೊಳಿಸಲಾಗಿತ್ತು.

ಮುಂದುವರೆದು, ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018 ಬೆಂಗಳೂರು, ದಿನಾಂಕ:20-09-2019ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018-19ನೇ ಸಾಲಿನ ಆಯ್ಕವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿ ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ವೈ 2018, ದಿನಾಂಕ:20-09-2019 ರಂತೆ "ಮುಖ್ಯ ಮಂತ್ರಿಗಳ ನವ ನಗರೋತ್ಥಾನ" ಯೋಜನೆಯಡಿ ರೂ.8015.37 ಕೋಟಿಗಳ ಕ್ರಿಯಾಯೋಜನೆಯನ್ನು ಅನುಮೋದಿಸಲಾಗಿರುತ್ತದೆ. ಸದರಿ ಕ್ರಿಯಾಯೋಜನೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ನಅಇ 648 ಎಂಎನ್‌ವೈ 2018, ದಿನಾಂಕ: 31-05-2019 ರಂತೆ ಅನುಮೋದಿಸಲಾಗಿರುವ ರೂ.573.57 ಕೋಟಿಗಳ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಕ್ರಿಯಾಯೋಜನೆಯಲ್ಲಿ ಸೇರಿರುವ ಎಲ್ಲಾ ಕಾಮಗಾರಿಗಳನ್ನು ಮತ್ತು ಕಾಮಗಾರಿಗಳ ಮೊತ್ತಗಳನ್ನು ಮೂಲ ಆದೇಶದಂತೆಯೇ ಉಳಿಸಿಕೊಂಡು ನೂತನ ಕ್ರಿಯಾಯೋಜನೆಯಲ್ಲಿ ಅಳವಡಿಸಲಾಗಿರುತ್ತದೆ.

.....2

Scanned by CamScanner

ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ ಕಾಯ್ಕೆಯಡಿ ಈ ಯೋಜನೆಗಳನ್ನು ನಗಧಿತ ಕಾಲದಲ್ಲಿ ಅನುಷ್ಠಾನಗೊಳಿಸಬೇಕಿದ್ದು, ಈಗಾಗಲೇ ಸಾಕಷ್ಟು ಕಾಲವಿಳಂಬವಾಗಿರುವುದರಿಂದ, ಮತ್ತು ಎಸ್.ಸಿ./ಎಸ್.ಟಿ ಜನಾಂಗದವರು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಈಗಾಗಲೇ ಜಾಬ್ ಸಂಖ್ಯೆ ನೀಡಿರುವುದರಿಂದ ಮತ್ತೊಮ್ಮೆ ಜಾಬ್ ಸಂಖ್ಯೆ ನೀಡುವುದು ಅನಾವಶ್ಯಕವಾಗಿ ಕಾಲವಿಳಂಬವಾಗುವುದನ್ನು ತಡೆಗಟ್ಟುವ ಸಲುವಾಗಿ ಈ ಕೂಡಲೇ ಪ್ರಸ್ತುತ ಅನುಮೋದಿಸಿರುವ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯಡಿ ಸರ್ಕಾರದ ಆದೇಶ ಸಂಖ್ಯೆ:ನಅಇ 648 ಎಂಎನ್‌ಪೈ 2018, ದಿನಾಂಕ:31-05-2019 ರಂತೆ ರೂ.573.57 ಕೋಟಿಗಳ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಕ್ರಿಯಾಯೋಜನೆಯಲ್ಲಿ ಸೇರಿರುವ ಎಲ್ಲಾ ಕಾಮಗಾರಿಗಳನ್ನು ಮತ್ತು ಕಾಮಗಾರಿಗಳ ಮೊತ್ತಗಳನ್ನು ಮೂಲ ಆದೇಶದಂತೆಯೇ ಉಳಿಸಿಕೊಂಡು ನೂತನ ಕ್ರಿಯಾಯೋಜನೆಯಲ್ಲಿ ಮುಂದುವರೆಸಿರುವುದರಿಂದ ಈಗಾಗಲೇ ನೀಡಲಾಗಿರುವ ಜಾಬ್ ಸಂಖ್ಯೆಯ ಪ್ರಮಾಣ ಪತ್ರಗಳನ್ನು ಮುಂದುವರೆಸಿ, ಈಗಾಗಲೇ ನೀಡಲಾಗಿರುವ ಜಾಬ್ ಸಂಖ್ಯೆಗಳಲ್ಲಿನ ಷರಾ ಕಾಲಂನಲ್ಲಿ "ಸರ್ಕಾರದ ಆದೇಶ ಸಂಖ್ಯೆ:ನಅಇ 648 ಎಂಎನ್‌ಪೈ 2018, ದಿನಾಂಕ: 31-05-2019"ಅನ್ನು ಪ್ರಸ್ತುತ "ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ"ಯಲ್ಲಿ ಮುಂದುವರೆಸಿರುವುದರಿಂದ ಇದರ ಜೊತೆಗೆ "ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂಎನ್‌ಪೈ 2018, ದಿನಾಂಕ:20-09-2019"ಅನ್ನೂ ಸಹ ಕಡತ ವ್ಯವಹರಣ ದಾಖಲಾತಿಗಳಲ್ಲಿ ನಮೂದಿಸಿಕೊಂಡು ಹಾಗೂ ಸದರಿ ಜಾಬ್ ಸಂಖ್ಯೆಯ ಪ್ರಮಾಣ ಪತ್ರಗಳನ್ನು "ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ"ಯ ಬದಲು "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಎಂದು ಓದಿಕೊಳ್ಳಲು ಹಾಗೂ ಕಾಮಗಾರಿಗಳನ್ನು ನಿಯಮಾನುಸಾರ ಕೂಡಲೇ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ವಿಶೇಷ ಆಯುಕ್ತರು
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ವಿಶೇಷ ಆಯುಕ್ತರು (ಯೋಜನೆ)
2. ವಿಶೇಷ ಆಯುಕ್ತರು (ಹಣಕಾಸು)
3. ಪ್ರಧಾನ ಅಭಿಯಂತರರು.
4. ಎಲ್ಲಾ ವಲಯದ ಜಂಟಿ ಆಯುಕ್ತರುಗಳು / ಮುಖ್ಯ ಅಭಿಯಂತರರುಗಳು.
5. ಮುಖ್ಯ ಆರ್ಥಿಕ ಅಧಿಕಾರಿ ರವರ ಸೂಕ್ತ ಕ್ರಮಕ್ಕಾಗಿ.
6. ಮುಖ್ಯ ಲೆಕ್ಕಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.
7. ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳ ಸೂಕ್ತ ಕ್ರಮಕ್ಕಾಗಿ.

Scanned by CamScanner